International Journal of Kannada Research
www.kannadajournal.com

ISSN: 2454–5813
IJKR 2023; 9(2): 94-97
© 2023 IJKR
www.kannadajournal.com
Received: 20-02-2023
Accepted: 27-03-2023

**ಡಾ. ಅನುಪಮ ಎಚ್ ಎಸ್**
ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು
ಕೆಂಗೇರಿ ಉಪನಗರ, ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ಡಾ. ಅನುಪಮ ಎಚ್ ಎಸ್**
ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು
ಕೆಂಗೇರಿ ಉಪನಗರ, ಬೆಂಗಳೂರು, ಕರ್ನಾಟಕ, ಭಾರತ

# ಅಧಿಕಾರ ಅಧೀನತೆಗಳನ್ನು ಕುರಿತು ಮಿಲೆಟ್ ವಿಚಾರಗಳು ಕೇಟ್ ಮಿಲೆಟ್ ಳ ಸೆಕ್ಷುಯಲ್ ಪಾಲಿಟಿಕ್ಸ್ ಕೃತಿಯ ಕನ್ನಡ ಅನುವಾದ ಅನುವಾದಕರು; ಶ್ರೀಮತಿ ಎಚ್ ಎಸ್

**ಡಾ. ಅನುಪಮ ಎಚ್ ಎಸ್**

**ಪೀಠಿಕೆ**
ಕನ್ನಡ ಅಧ್ಯಯನ ಸಂದರ್ಭದಲ್ಲಿ ಸ್ತ್ರೀವಾದಿ ಅಧ್ಯಯನವು ಗಂಭೀರ ಅಧ್ಯಯನವಾಗಿ ರೂಪುಗೊಂಡ ನಂತರವೂ ಅದು ಮಹಿಳೆಯರ ವಲಯಕ್ಕೆ ಸೀಮಿತವಾದದ್ದು ಎಂಬ ಗ್ರಹಿಕೆಯೇ ನೆಲೆಗೊಂಡಿತ್ತು. ಇತ್ತೀಚೆಗಷ್ಟೇ ಸ್ತ್ರೀವಾದದ ಅವಶ್ಯಕತೆ ಮಹಿಳೆಯರಷ್ಟೇ ಪುರುಷರಿಗೂ ಇದೆ ಎಂಬ ಅರಿವು ಜಾಗೃತಗೊಂಡು, ಪುರುಷರು ಗಂಭೀರ ಅಧ್ಯಯನ ಮತ್ತು ಚಿಂತನೆಗಳಲ್ಲಿ ತೊಡಗಿದ್ದಾರೆ. ಸ್ತ್ರೀವಾದದ ತಾತ್ವಿಕತೆಯನ್ನು ಕನ್ನಡದಲ್ಲಿ ರೂಪಿಸಿಕೊಳ್ಳಲು ಅನುವಾದ ಕೃತಿಗಳಾದ 'ದ ಸೆಕೆಂಡ್ ಸೆಕ್ಸ್' (ಸಿಮೋನ್ ದ ಬೋವಾ) ಹೆಣ್ಣುತನ ಎಂಬ ಕಣ್ಕಟ್ಟು (ಬೆಟ್ಟಿ ಫ್ರೀಡನ್) ಆಧುನಿಕ ಭಾರತದಲ್ಲಿ ಮಹಿಳೆ (ಜೆರಾಲ್ಡಿನ್ ಪೇರಿಬ್ರ್ಸ್) ಎಲ್ಲರಿಗಾಗಿ ಸ್ತ್ರೀವಾದ : ಆಪ್ತತೆಯ ರಾಜಕಾರಣ (ಬೆಲ್ ಹುಕ್ಸ್) ಸ್ತ್ರೀವಾದ :ಅಂಚಿನಿಂದ ಕೇಂದ್ರೆದೆಡೆಗೆ (ಬೆಲ್ ಹುಕ್ಸ್) ಎಲ್ಲರೂ ಸ್ತ್ರೀವಾದಿಗಳಾಗೋಣ (ಚಿಮಮಾಂಡ ಅಡಿಚಿ) ಇಂತಹ ಶ್ರೀಮತಿಯವರ ಅನುವಾದ ಕೃತಿಗಳು ಪ್ರಮುಖ ಪಾತ್ರವನ್ನು ವಹಿಸುತ್ತಿವೆ. ಸ್ತ್ರೀವಾದವನ್ನು ಅರ್ಥಮಾಡಿಕೊಳ್ಳಲು ರೂಪಿಸಲು ಕೇಟ್ ಮಿಲೆಟ್ ವಿಚಾರಗಳನ್ನು ಒಳಗೊಂಡ 'ಅಧಿಕಾರ ಮತ್ತು ಅಧೀನತೆ" ಎಂಬ ಅನುವಾದಿತ ಸಂಶೋಧನಾ ಕೃತಿಯು ಹೆಚ್ಚು ಸಹಕಾರಿಯಾಗಬಲ್ಲದು.

**ಉದ್ದೇಶ ಮತ್ತು ವ್ಯಾಪ್ತಿ**
ಸ್ತ್ರೀ ಪುರುಷರ ನಡುವಿನ ಅಧಿಕಾರ ಮತ್ತು ಅಧೀನತೆ ನೆಲೆಗಳಿಗೆ ಕಾರಣಗಳೇನು ಎಂಬ ಹುಡುಕಾಟದಲ್ಲಿ ಪಿತೃಪ್ರಧಾನ ಸಮಾಜವೇ ಕಾರಣ ಎಂಬ ಉತ್ತರವನ್ನು ಸಾಕಷ್ಟು ಚಿಂತಕರು ಮುಂದಿಡುತ್ತಾರೆ. ಈ ಪುರುಷ ಪ್ರಧಾನತೆ ನೆಲೆಗೊಂಡ ಕಾರಣ ಮತ್ತು ಹಿನ್ನಲೆಗಳನ್ನು ಅರ್ಥಮಾಡಿಕೊಳ್ಳದೆ ಮಾಡುವ ಯಾವುದೇ ಚರ್ಚೆ ಮತ್ತು ಹೋರಾಟಗಳು ಹಾವಿಲ್ಲದ ಹುತ್ತವನ್ನು ಬಡಿದಂತೆ ವ್ಯರ್ಥವಾಗುತ್ತದೆ. ಈ ನಿಟ್ಟಿನಲ್ಲಿ ಕೇಟ್ ಮಿಲೆಟ್‌ಳ ವಿಚಾರಧಾರೆಗಳನ್ನು ಅರ್ಥೈಸಿಕೊಳ್ಳುವ ಪ್ರಯತ್ನ ಈ ಲೇಖನದ ಉದ್ದೇಶವಾಗಿದ್ದು, ೫೯೨ ಪುಟಗಳಲ್ಲಿ ಹಬ್ಬಿರುವ ಕೃತಿಯ ವಿಚಾರಗಳನ್ನು ಒಂದು ಲೇಖನದಲ್ಲಿ ಹಿಡಿದಿಡಲು ಸಾಧ್ಯವಿಲ್ಲವಾದ್ದರಿಂದ ಪರಿಚಯದ ನೆಲೆಯಲ್ಲಿ ಲೇಖನವನ್ನು ರೂಪಿಸಲಾಗುತ್ತದೆ.

**ಫಲಿತಗಳು**
೧. ಅಧಿಕಾರ ಮತ್ತು ಅಧೀನತೆಗಳು ಸ್ತ್ರೀಪುರಷರಿಗೆ ಮಾತ್ರ ಸೀಮಿತವಾಗಿಲ್ಲ. ಇವು ಎಲ್ಲ ವರ್ಗ, ಜಾತಿಗಳ, ಗುಂಪುಗಳ ನಡುವೆಯೂ ಇದೆ.
೨. ಎಲ್ಲ ಬಗೆಯ ವರ್ಗವಿಭಜನೆಗೆ ಲೈಂಗಿಕತಾ ವಿಭಜನೆಯೇ ಮೂಲ.
೩. ಅಧಿಕಾರ ಮತ್ತು ಅಧೀನತೆಗಳು ಗಂಡು – ಹೆಣ್ಣಿನ ಸಂಭೋಗದಲ್ಲಿಯೂ ಗುರುತಿಸಬಹುದ್ದಾಗಿದ್ದು, ಅಲ್ಲಿಂದಲೇ ಅವುಗಳ ನೆಲೆಗಳು ರೂಪುಗೊಂಡಿವೆ.
೪. ಸ್ತ್ರೀವಾದ ಸ್ತ್ರೀಯರಿಗೆ ಮಾತ್ರ ಸೀಮಿತವಾಗದೆ ಎಲ್ಲ ಅಧೀನ ವರ್ಗಗಳ ಅನಿವಾರ್ಯವೂ ಆಗಿದೆ. ಅದಕ್ಕೊಂದು ಸೂಕ್ತ ಪರಿಭಾಷೆಯನ್ನು ಬಳಸಿಕೊಳ್ಳಬೇಕು.
೫. ಅಧಿಕಾರ ಮತ್ತು ಅಧೀನತೆಗಳೆರಡು ಪಿತೃ ಪ್ರಧಾನ ಶಿಶ್ನ ಕೇಂದ್ರಿತವಾಗಿವೆ.

**ಮುಖ್ಯ ಪದಗಳು** ಸ್ತ್ರೀವಾದ, ಪುರಷ, ಪ್ರಧಾನತೆ, ಲೈಂಗಿಕತಾ ರಾಜಕಾರಣ, ಶಿಶ್ನಕೇಂದ್ರಿತ ಎದುರು ಕ್ರಾಂತಿ.

**ಪೀಠಿಕೆ:** ಜಗತ್ತಿನಲ್ಲಿ ಉತ್ತಮವಾದ ಜ್ಞಾನ ಎಲ್ಲದ್ದರೂ ನನ್ನೆಡೆಗೆ ಬರಲಿ ಎನ್ನುತ್ತಾರೆ ವಿವೇಕಾನಂದರು. ಜ್ಞಾನವನ್ನು ಹಲವು ಮೂಲಗಳಿಂದ ಸಂಗ್ರಹಿಸಿಕೊಂಡಾಗ ಮನುಷ್ಯ ಸರ್ವಜ್ಞನಾಗುತ್ತಾನೆ ಎನ್ನುವುದನ್ನು ಪುಲಿಗೆರೆ ಸೋಮನಾಥ ತನ್ನ ಸೋಮೇಶ್ವರ ಶತಕದಲ್ಲಿ ಹೀಗೆ ಹೇಳುತ್ತಾನೆ **"ಕೆಲವಂ ಬಲ್ಲವರಿಂದ ಕಲ್ತು, ಕೆಲವಂ ಶಾಸ್ತ್ರಗಳನ್ನು ಕೇಳುತ ಕಲಿತು, ಕೆಲವಂ ಸಜ್ಜನರ ಸಂಗದಿಂದ ಕಲಿತು ಮನುಷ್ಯ ಸರ್ವಜ್ಞನಾಗುತ್ತಾನೆ"** ಹಲವು ಹಳ್ಳಗಳು ಸೇರಿ ಸಮುದ್ರವಾಗುವಂತೆ. ಹಲವು ಮೂಲಗಳಿಂದ ಕಲಿಯುವಾಗ ಬಲ್ಲವರಿಂದ ಕಲಿಯುವ ವಿಧಾನಗಳು ಅನೇಕ. ಅವುಗಳಲ್ಲಿ ಮುಖ್ಯವಾದವು ಓದು ಮತ್ತು ಬರಹ. ಬಲ್ಲವರ ಬರವಣಿಗೆಗಳು ಜ್ಞಾನದ ಮಾರ್ಗಗಳಾಗಿವೆ. ನಮ್ಮದೇ ಭಾಷೆಯ ಬರವಣಿಗೆಗಳನ್ನು ಓದಿ ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ. ನಮಗೆ ಬಾರದ ಭಾಷೆಯಲ್ಲಿರುವ ಬರವಣಿಗೆಗಳನ್ನು ಅರ್ಥಮಾಡಿಕೊಳ್ಳಲು ಅನುವಾದಕರ ಅವಶ್ಯಕತೆ ಇದೆ. ಆದ್ದರಿಂದಲೇ ಅನುವಾದಕರನ್ನು ಜ್ಞಾನದೆಡೆಗೆ ನಡೆಸುವ ಬೆಳಕಿಂಡಿ ಎನ್ನಬಹುದು. ಅನುವಾದ ಕೈಗೊಳ್ಳುವ ಲೇಖಕರು ಕೃತಿಯ ಭಾಷೆ ಅನುವಾದ ಮಾಡುವ ಭಾಷೆ ಎರಡರಲ್ಲಿಯೂ ಪರಿಪೂರ್ಣ ಹಿಡಿತವನ್ನು ಹೊಂದಿರಬೇಕು. ಅಲ್ಲದೇ ಆಯಾ ಭಾಷೆಯ ಸಾಂಸ್ಕೃತಿಕ ಪರಿಸರವನ್ನು ನಮ್ಮ ಭಾಷೆಯ ಪರಿಸರದೊಂದಿಗೆ ಹೊಂದಿಸಿ ಬರೆಯುವಾಗ ಮೂಲ ಕೃತಿಯ ತಿರುಳಿಗೆ ಮುಕ್ಕಾಗದಂತೆ ಕೃತಿಯನ್ನು ಮತ್ತಷ್ಟು ಸುಂದರವಾಗಿಸಿ ಬರೆಯಬಹುದು ಎನ್ನುವುದಕ್ಕೆ ಕುವೆಂಪು ಅವರ ಬಿರುಗಾಳಿ ಮತ್ತು ರಕ್ತಾಕ್ಷಿ ನಾಟಕಗಳು ಉತ್ತಮ ಉದಾಹರಣೆಗಳಾಗಿವೆ.

ಕನ್ನಡದ ಪ್ರಮುಖ ಅನುವಾದಕರಲ್ಲಿ ಒಬ್ಬರಾಗಿರುವ ಶ್ರೀಮತಿ ಎಚ್.ಎಸ್ ಅವರು ಇಂಗ್ಲೀಷ್‌ನಲ್ಲಿರುವ ಸ್ತ್ರೀವಾದಿ ತಿಳುವಳಿಕೆಗಳನ್ನು ಕನ್ನಡಕ್ಕೆ ತಂದುಕೊಡುವ ಮೂಲಕ ಕನ್ನಡ ಸ್ತ್ರೀವಾದಿ ಚಿಂತನಾ ವಲಯವನ್ನು ವಿಸ್ತರಿಸಿದ್ದಾರೆ. ಇವರ ಅಧಿಕಾರ ಮತ್ತು ಅಧೀನತೆ ಕೃತಿಯು ಕೇಟ್ ಮಿಲೆಟ್‌ಳ ಸೆಕ್ಸ್ಯುಯಲ್ ಪಾಲಿಟಿಕ್ಸ್ ಎಂಬ ಸಂಶೋದನಾ ಕೃತಿಯ ಅನುವಾದವಾಗಿದೆ.

**ಶ್ರೀಮತಿ ಎಚ್.ಎಸ್**

ಕನ್ನಡ ಸ್ತ್ರೀವಾದಿ ಚಿಂತಕಿಯರಲ್ಲಿ ಶ್ರೀಮತಿ ಎಚ್. ಎಸ್ ಅವರು ಮುಖ್ಯವಾಗಿದ್ದಾರೆ. ಅವರು ಅಧ್ಯಾಪನ ಸಂಶೋದನೆ, ಸಂಪಾದನೆ ಅಂಕಣ ಬರಹ, ಅನುವಾದ, ಸ್ತ್ರೀವಾದಿ ಚಿಂತನೆ ಹಾಗೂ ಇನ್ನೂ ಮೊದಲಾದ ಕ್ಷೇತ್ರಗಳಲ್ಲಿ ತಮ್ಮ ಛಾಪನ್ನು ಮೂಡಿಸಿದ್ದಾರೆ. ಕನ್ನಡದಲ್ಲಿ ಸ್ತ್ರೀವಾದಿ ಚಿಂತನೆಗಳ ಬರವಣಿಗೆ ಮತ್ತು ಸ್ತ್ರೀವಾದಿ ಕೃತಿಗಳ ಅನುವಾದ ಇವು ಶ್ರೀಮತಿಯವರ ಪ್ರಿಯವಾದ ಕ್ಷೇತ್ರಗಳು ಈ ಎರಡೂ ಕ್ಷೇತ್ರಗಳಲ್ಲಿ ಅವರು ತಮ್ಮನ್ನು ಆಳವಾಗಿ, ಗಂಭೀರವಾಗಿ ತೊಡಗಿಸಿಕೊಂಡು ಮಹತ್ವದ ಕೃತಿಗಳನ್ನು ನೀಡಿದ್ದಾರೆ.

**ಕೇಟ್ ಮಿಲೆಟ್**

ಅಮೇರಿಕಾದ ಸ್ತ್ರೀವಾದಿ ಲೇಖಕಿ ಕೇಟ್ ಮಿಲೆಟ್ ಇವರ ಪೂರ್ಣ ಹೆಸರು ಕ್ಯಾಥರೀನ್ ಮರ್ರೆ ಮಿಲೆಟ್. ಕಾಲ ೧೯೩೪ ರಿಂದ ೨೦೧೭. ಎರಡನೆಯ ಅಲೆಯ ಸ್ತ್ರೀವಾದಿಗಳಲ್ಲಿ ಪ್ರಮುಖರು ಇಂಗ್ಲೀಷ್ ಸಾಹಿತ್ಯದ ಗಂಭೀರ ವಿದ್ಯಾರ್ಥಿನಿ. ತಮ್ಮ ಪಿಎಚ್.ಡಿ ಪದವಿಗಾಗಿ ನಡೆಸಿದ ಅಧ್ಯಯನ ಪ್ರಬಂಧವೇ ಮುಂದೆ ಸೆಕ್ಸುಯಲ್ ಪಾಲಿಟಿಕ್ಸ್ ಎಂಬ ಹೆಸರಿನಲ್ಲಿ ಪ್ರಕಟವಾಯಿತು.

**ಕೃತಿಯ ಕುರಿತು**

ಪುರುಷ ಪ್ರಧಾನತೆ, ಆ ಮೂಲಕ ಪಿತೃಪ್ರಧಾನತೆ ಮಹಿಳೆಯರ ಅಧೀನ ಸ್ಥಿತಿ ಎಂಬುವು ಮೇಲೆ ಕಾಣುವ ಸಂಗತಿಗಳು ಮಾತ್ರವಲ್ಲ. ಆಳದಲ್ಲಿ ಇದು ಎಲ್ಲ ಬಗೆಯ ಅಧಿಕಾರ ಮತ್ತು ಅಧೀನತೆಗಳ ಮಾದರಿಗಳನ್ನು ತನ್ನೊಳಗೆ ಹುದುಗಿಸಿಕೊಂಡಿದೆ. ಎನ್ನುವುದನ್ನು ಮಿಲೆಟ್ ಅವರ ಅಧ್ಯಯನವು ತಾತ್ವಿಕವಾಗಿ ನಿರೂಪಿಸಿತು. ಲೈಂಗಿಕತಾ ರಾಜಕಾರಣವನ್ನು ಸ್ಪಷ್ಟವಾಗಿ ವಿವರಿಸಲು ಆಕೆ ಸಾಹಿತ್ಯ ವಲಯವನ್ನು ಸೂಕ್ಷ್ಮ ವಿಶ್ಲೇಷಣೆಗಳಿಗೆ ಒಳಪಡಿಸುತ್ತಾಳೆ. ಸಾಹಿತ್ಯ ವಲಯವನ್ನು ವ್ಯಕ್ತಿಗಳ ಸಾಮರ್ಥ್ಯಗಳ ಅಭಿವ್ಯಕ್ತಿಯ ಮಾಧ್ಯಮಗಳೆಂದು ಗ್ರಹಿಸುವ ರೂಢಿ ನಮ್ಮಲ್ಲಿ ಪ್ರಚಲಿತವಾಗಿದೆ. ಆದರೆ ಕೇಟ್ ಮಿಲೆಟ್ ಈ ವಲಯವು ಕೂಡ ಒಂದು ಸಾಂಸ್ಥಿಕ ರಚನೆಯೇ ಆಗಿದೆ ಎಂಬುದನ್ನು ನಿರೂಪಿಸಿತ್ತಾಳೆ.

ಲೈಂಗಿಕತಾ ರಾಜಕಾರಣ ಕೃತಿಯನ್ನು ಕನ್ನಡಕ್ಕೆ ಶ್ರೀಮತಿ ಎಚ್.ಎಸ್ ಅವರು ಅಧಿಕಾರ ಮತ್ತು ಅಧೀನತೆ ಎಂಬ ಹೆಸರಿನಲ್ಲಿ ಅನುವಾದಿಸಿ ಕೊಟ್ಟಿದ್ದಾರೆ. ಇದನ್ನು ಅವರು ಅನುವಾದ ಎಂದು ಕರೆಯದೆ ಕನ್ನಡ ನಿರೂಪಣೆ ಎಂದು ಕರೆಯುತ್ತಾರೆ. ಕನ್ನಡಿಗರಿಗೆ ಅರ್ಥವಾಗುವಂತೆ ಕನ್ನಡ ಪರಿಸರಕ್ಕೆ ಹೊಂದುವಂತೆ ಕೃತಿ ರಚನೆಯನ್ನು ಮಾಡಿದ್ದಾರಲ್ಲದೆ, ಮಿಲೆಟ್ ಬಳಸಿಕೊಳ್ಳುವ ಸಾಹಿತ್ಯ ಕೃತಿಗಳೆಲ್ಲದರ ಪರಿಚಯವೂ ಕನ್ನಡದ ಮನಸುಗಳಿಗೆ ಇರಲಾರದು, ಆದರೆ ಈ ಅನ್ವಯಕ ಮಾದರಿಯನ್ನು ತಾತ್ವಿಕವಾಗಿ ಗ್ರಹಿಸುವ ಅಗತ್ಯವಂತೂ ಇದ್ದೇ ಇದೆ. ಅದಕ್ಕಾಗಿ ಕನ್ನಡ ಓದಿಗಾಗಿ ಒಂದು ಸಣ್ಣ ಒಳದಾರಿಯನ್ನು ಕಲ್ಪಿಸಲಾಗಿದೆ. ಮಿಲೆಟ್ ತನ್ನ ವಿಶ್ಲೇಷಣೆಗೆ ಅಗತ್ಯವಾದ ಕೃತಿಭಾಗಗಳನ್ನು ವಿವರಗಳಲ್ಲಿ ಕೊಟ್ಟಿದ್ದಾಳೆ. ಕನ್ನಡ ಓದಿನ ಸಂದರ್ಭದಲ್ಲಿ ಆ ವಿವರಗಳನ್ನು ಕೊಡಲು ಹೋಗಿಲ್ಲ, ಅದಕ್ಕೆ ಸಂಬಂಧಿಸಿದಂತೆ ಮಿಲೆಟ್ ಕಟ್ಟಿಕೊಡುವ ಅನ್ವಯಿಕ ಮಾದರಿಯ ಸ್ವರೂಪವನ್ನು ಒಟ್ಟುಗೂಡಿಸಿ ನೋಡುವ ಪ್ರಯತ್ನವನ್ನು ಮಾತ್ರವೇ ಇಲ್ಲಿ ಮಾಡಲಾಗಿದೆ, ಎಂದು ಅನುವಾದಕರು ಸ್ಪಷ್ಟಿಪಡಿಸುತ್ತಾರೆ. ಕೃತಿಯು ಲೈಂಗಿಕತಾ ರಾಜಕಾರಣದ ಕೆಲವು ಸನ್ನಿವೇಷಗಳು ಮತ್ತು ಸಿದ್ಧಾಂತ, ಲೈಂಗಿಕತಾ ಕ್ರಾಂತಿ, ಸಾಹಿತ್ಯದಲ್ಲಿ ಲೈಂಗಿಕತಾ ರಾಜಕಾರಣದ ಪ್ರತಿಫಲನಗಳು ಎಂಬ ಮೂರು ಅಧ್ಯಾಯಗಳಲ್ಲಿ ವಿಸ್ತೃತವಾಗಿ ಹರಡಿದೆ. ಈ ಕೃತಿಯು ಒಂದು ಸಂಶೋಧನಾ ಮಹಾಪ್ರಬಂಧಕ್ಕೆ ಯೋಗ್ಯವಾಗುವಷ್ಟೇ ವಿಷಯ ವಿಸ್ತಾರವನ್ನು ಹೊಂದಿದ್ದು, ಕೆಲ ಹೊಳಹುಗಳನ್ನು ಮಾತ್ರ ಇಲ್ಲಿ ನೀಡಲು ಪ್ರಯತ್ನಿಸಲಾಗಿದೆ.

**ಮಹತ್ವ**

ಜಗತ್ತಿನ ಅಧೀನ ನೆಲೆಯ ವರ್ಗದವರನ್ನೆಲ್ಲಾ ಬಂಧಿಸಿರುವುದು ಪಿತೃಪ್ರಧಾನ ಸಮಾಜದ ವ್ಯವಸ್ಥೆ. ಎಲ್ಲಾ ವರ್ಗದವರ ಅಧೀನ ನೆಲೆಯಲ್ಲಿರುವ ಮಹಿಳೆಯರ ಸ್ವರೂಪ, ಸಂಸ್ಕೃತಿ, ಸಾಮಾಜಿಕ ವಾತಾವರಣಗಳು ಭಿನ್ನವಾಗಿರಬಹುದು ಆದರೆ ಅವರೆಲ್ಲರನ್ನು ಸಮಾನವಾಗಿ ಬಂಧಿಸಿರುವ ಚೌಕಟ್ಟು ಮಾತ್ರ ಪಿತೃಪ್ರಧಾನ ವ್ಯವಸ್ಥೆಯೇ ಆಗಿದೆ. ಆದ್ದರಿಂದ ಅಮೇರಿಕಾದ ಸಂಶೋಧಕಿ ಕೇಟ್ ಮಿಲೆಟ್‌ಳ ವಿಚಾರಗಳು ಕನ್ನಡದ ಮಹಿಳೆಯರಿಗೂ ಅನ್ವಯವಾಗುತ್ತವೆ. ಮಹಿಳೆಯ ಇಂದಿನ ಸ್ಥಿತಿ ರೂಪುಗೊಳ್ಳಲು ಕಾರಣಗಳು, ಸುಧಾರಣೆಗಳು, ನಡೆದ ಹೋರಾಟಗಳ ಮಾದರಿ, ತಲುಪಬೇಕಾಗಿರುವ ಗುರಿ ಇತ್ಯಾದಿಗಳನ್ನು ಅರಿಯುವಲ್ಲಿ ಈ ಕೃತಿಯು ಮಹತ್ವಪೂರ್ಣವಾದ ಸಲಕರಣೆಗಳನ್ನು ಒದಗಿಸಬಲ್ಲದು.

**ಅಧಿಕಾರ ಮತ್ತು ಅಧೀನತೆಗಳ ಮೂಲದ ಹುಡುಕಾಟ**

ಪುರಷ ಪ್ರಧಾನ ವ್ಯವಸ್ಥೆಯನ್ನು ಕೇಟ್ ಮಿಲೆಟ್ ಪಿತೃಪ್ರಧಾನ ವ್ಯವಸ್ಥೆ, ಶಿಶ್ನಕೇಂದ್ರಿತ ವ್ಯವಸ್ಥೆ ಎಂದೇ ವಿವರಿಸುತ್ತಾಳೆ. ಈ ವ್ಯವಸ್ಥೆ

ಪುರುಷರನ್ನು ತನ್ನ ದಾಳವಾಗಿಸಿಕೊಂಡು ಮುಂದುವರೆಯುತ್ತದೆ ವಿನಃ, ಪುರಷರೇ ಇದಕ್ಕೆ ನೇರ ಕಾರಣರಾಗಿಲ್ಲ. ಏಕೆಂದರೆ ಈ ವ್ಯವಸ್ಥೆಯಲ್ಲಿ ಕಳೆದುಕೊಳ್ಳುವ ಸರದಿ ಪುರಷನದೂ ಆಗಿರುತ್ತದೆ. ಇದನ್ನು ಗ್ರಹಿಸದ ಸ್ತ್ರೀವಾದಿ ಚಿಂತನೆ ಮಹಿಳೆಯರಿಗಷ್ಟೇ ಸೀಮಿತವಾಗಿತ್ತು. ಈಗ ಅದು ಮಹಿಳೆಯರ ಗ್ರಹಿಕೆಯನ್ನು ಮೀರಿ ಎಲ್ಲ ವರ್ಗಗುಂಪುಗಳಿಗೂ ವಿಸ್ತರಿಸಿದೆ. ಅಧಿಕಾರ ಅಧೀನತೆಗಳ ಮೂಲ ಲೈಂಗಿಕತಾ ರಾಜಕಾರಣದಲ್ಲಿದೆ. ಏಕೆಂದರೆ ಸಮಾಜದ ಎಲ್ಲಾ ಅಧಿಕಾರ ಅಧೀನತೆಗಳ ಮೂಲ ಸ್ತ್ರೀಪುರುಷರಿಂದಲೇ ಆರಂಭವಾಗಿದೆ. ಯಾವಾಗ ಹೆಣ್ಣು ಪುರುಷಾಧೀನತೆಗೆ ಒಗ್ಗಿದಳೋ ಆಗಲೇ ಗುಲಾಮರು, ಕೆಳವರ್ಗ, ಮೇಲ್ವರ್ಗ ಎಂಬ ನೆಲೆಗಳು ರೂಪುಗೊಂಡವು ಎನ್ನುತ್ತಾಳೆ ಮಿಲೆಟ್.

ಗಂಡು ಹೆಣ್ಣಿನ ಅಧಿಕಾರ ಅಧೀನತೆಗಳನ್ನು ಅವರ ಸಂಭೋಗ ಕ್ರಿಯೆಯಲ್ಲಿಯೇ ಗುರುತಿಸಬಹುದಾಗಿದೆ. ಹೆಣ್ಣು ನಿಷ್ಕ್ರಿಯಳಾಗಿ ಗಂಡಿಗೆ ಅರ್ಪಿಸಿಕೊಳ್ಳುವ ಬಗೆ, ಗಂಡು ಹೆಣ್ಣನ್ನು ಆಕ್ರಮಿಸುವ ರೀತಿಯಲ್ಲಿಯೇ ಹೆಣ್ಣು ನಿಷ್ಕ್ರಿಯತೆ ಮತ್ತು ಒಪ್ಪಿಸಿಕೊಳ್ಳುವ ಗುಣವನ್ನು ತರಬೇತುಗೊಳಿಸಲಾಗಿದೆ. ಇಲ್ಲಿಂದಲೇ ಅವಳ ಅಧೀನತೆ ಆರಂಭಗೊಳ್ಳುತ್ತದೆ. ಆದ್ದರಿಂದ ಹೆಣ್ಣನ್ನು ಹಾಸಿಗೆಯಲ್ಲಿ ಬಗ್ಗಿಸಿ ಆಕ್ರಮಿಸಿದರೆ ಸಾಕು ಉಳಿದ ವಲಯಗಳಲ್ಲಿ ಅವಳು ಅಧೀನತೆಗೆ ಒಗ್ಗುತ್ತಾಳೆ ಎಂಬ ಪುರುಷ ಸಾಹಿತಿಗಳ ಮಾತನ್ನು ಮಿಲೆಟ್ ವಿವರಿಸುತ್ತಾಳೆ.

ರಾಜಕಾರಣ ಎಂದರೇನು ಎಂಬುದನ್ನು ವಿವರಿಸುವ ಮಿಲೆಟ್ ಅಧಿಕಾರದ ನೆಲೆಯನ್ನು ಹಿಡಿಯಲು ನಡೆಸುವ ರೂಪಿಸುವ ತಂತ್ರಗಳೇ ರಾಜಕಾರಣ ಎನ್ನುತ್ತಾಳೆ. ಪುರಷ ಪ್ರಧಾನ ವ್ಯವಸ್ಥೆ ತನಗೊದಗಿದ ಅಧಿಕಾರದ ನೆಲೆಯನ್ನು ಉಳಿಸಿಕೊಳ್ಳಲು ಹಲವು ತಂತ್ರಗಳನ್ನು ಹೆಣೆಯುತ್ತಾನೆ. ಇವುಗಳಲ್ಲಿ ಸಂಪ್ರದಾಯ, ರೂಢಿ, ಸಂಸ್ಕೃತಿ, ಧರ್ಮ ಸಾಹಿತ್ಯಗಳು ಪ್ರಮುಖ ಸ್ಥಾನಗಳನ್ನು ಪಡೆಯುತ್ತವೆ. ಇದನ್ನೇ 'ಲೈಂಗಿಕತಾ ರಾಜಕಾರಣ' ಎಂದು ಕರೆಯುತ್ತಾಳೆ. ಮೇಲು ವರ್ಗದವರು ತಮಗೆ ಧಕ್ಕಿರುವ ಅಧಿಕಾರವನ್ನು ಉಳಿಸಿಕೊಳ್ಳಲು ಕೆಳವರ್ಗದವರ ಅಧೀನತೆಯನ್ನು ಹಾಗೆ ಉಳಿಸಲು ಇಂತಹದೇ ತಂತ್ರಗಳನ್ನು ಹೆಣೆಯುತ್ತಾರೆ. ಆದ್ದರಿಂದಲೇ ಸ್ತ್ರೀಯರು ಮತ್ತು ಕೆಳವರ್ಗದವರು ಇಂತಹ ರಾಜಕೀಯ ತಂತ್ರಗಳ ವಿರುದ್ಧ ಹೋರಾಡಬೇಕಾಗುತ್ತದೆ. ಆದ್ದರಿಂದಲೇ ಲೈಂಗಿಕತಾ ರಾಜಕಾರಣವನ್ನೊಳಗೊಂಡ ಸ್ತ್ರೀವಾದವು ಕೆಳವರ್ಗದವರಿಗೂ ಅನಿವಾರ್ಯವಾಗಿದೆ. ಕೆಳವರ್ಗದ ಪುರುಷರಿಗಾದರೂ ತಾನು ಗಂಡಸು ಎಂಬ ಅಧಿಕಾರದ ನೆಲೆಯಾದರೂ ಧಕ್ಕಿದೆ ಮೇಲ್ವರ್ಗದವರಿಂದ ಆದ ನೋವು ಅವಮಾನಗಳನ್ನು ಅಸಹಾಯಕತೆಗಳನ್ನು ತಮ್ಮ ಗಂಡಸುತನದ ಅಸ್ತ್ರವನ್ನು ಬಳಸಿಕೊಂಡು ತಮ್ಮ ಮಹಿಳೆಯರ ಮೇಲೆ ಪ್ರಯೋಗಿಸುತ್ತಾರೆ. ಅಂತಿಮವಾಗಿ ಎಲ್ಲ ಬಗೆಯ ಶೋಷಣೆಗಳಿಗೆ ಒಳಗಾಗುವಳು ಹೆಣ್ಣೇ ಅಗಿರುತ್ತಾಳೆ.

ಸ್ತ್ರೀಪುರುಷರ ನಡುವೆ ಅಧಿಕಾರ ಮತ್ತು ಅಧೀನತೆಯ ನೆಲೆಯ ಮೂಲವನ್ನು ಸಂಶೋಧಿಸಿದವರಲ್ಲಿ ಏಂಗಲ್ಸ್ ಪ್ರಮುಖನಾದವನು. ಮಗುವಿನ ಹುಟ್ಟಿನಲ್ಲಿ ತನ್ನ ಪಾತ್ರವನ್ನು ಅರಿತ ಪುರುಷ ಕುಟುಂಬ, ವಿವಾಹ ಸಂಸ್ಥೆಗಳ ಮೂಲಕ ತನ್ನ ಖಾಸಗಿ ಆಸ್ತಿ ತನ್ನ ಮಕ್ಕಳಿಗೆ ತಲುಪುವಂತೆ ನೋಡಿಕೊಂಡ ಅದಕ್ಕಾಗಿ ವಿವಾಹದ ಮೂಲಕ ಹೆಣ್ಣಿನ ಲೈಂಗಿಕತೆಯನ್ನು ನಿರ್ಬಂಧಿಸಿ ಒಬ್ಬ ಪುರುಷನಿಗೆ ಮೀಸಲಿರಿಸಲಾಯಿತು. ಇದನ್ನು ಹೆಣ್ಣು ಕೂಡ ಸಂತೋಷದಿಂದ ಒಪ್ಪಿಕೊಂಡಳು. ಸಮುದಾಯದಲ್ಲಿ ಹಲವು ಗಂಡುಗಳ ಬಳಕೆಗೆ ಒಳಗಾಗಬೇಕಾಗಿದ್ದ ಹೆಣ್ಣು ಒಬ್ಬ ಪುರುಷನ ಬಳಕೆಗೆ ಮಾತ್ರ ಸೀಮಿತವಾಗಿದ್ದು ಅವಳಿಗೂ ಸಮಾಧಾನವನ್ನು ತಂದಿತ್ತು. ಅಲ್ಲಿಂದ ಹೆಣ್ಣಿನ ಅಧೀನತೆ ಆರಂಭವಾಯಿತು ಎನ್ನುತ್ತಾನೆ ಏಂಗಲ್ಸ್. ಇದನ್ನು ಕೇಟ್ ಮಿಲೆಟ್ ತಳ್ಳಿ ಹಾಕುತ್ತಾಳೆ. ಮೂಲತಃ ಹೆಣ್ಣು ಗಂಡುಗಳ ಕೂಡುವಿಕೆ ಇಬ್ಬರಿಗೂ ಸಂತೋಷ ಕೊಡುವ ಸಂಗತಿ ಇದು ಇಬ್ಬರ ಒಪ್ಪಿಗೆಯಿಂದಲೇ ಜರುಗುತ್ತಿತ್ತು. ಹೆಣ್ಣು ಗಂಡಿನ ಬಳಕೆಗೆ ಇರುವವಳು ಎಂಬ ಭಾವವಿರಲಿಲ್ಲ. ಏಂಗಲ್ಸ್ ಚಿಂತನೆಯಲ್ಲಿ ಪುರಷ ಪ್ರಧಾನ ಚಿಂತನೆಯೇ ನುಸುಳಿ ಬಂದು ಹೆಣ್ಣು ಲೈಂಗಿಕ ಕ್ರಿಯೆಯಲ್ಲಿ ನಿಷ್ಕ್ರಿಯಳು ಎಂದೇ ಆತನು ಭಾವಿಸುವಂತಾಗಿದೆ. ಹೆಣ್ಣಿನ ಲೈಂಗಿಕಾಸಕ್ತಿ, ಅವಳ ಆನಂದ, ತುರಿಯಾವಸ್ಥೆ ಇತ್ಯಾದಿಗಳ ಬಗ್ಗೆ ತೀರಾ ಇತ್ತೀಚೆಗಷ್ಟೇ ಅರಿವು ಜಾಗೃತಿಗೊಂಡು ಅಧ್ಯಯನಗಳು ಆರಂಭಗೊಂಡಿವೆ. ಅದುವರೆಗೂ ಹೆಣ್ಣು ಅದನ್ನು ಅನುಭವಿಸಲಾರಳು, ಅದೇನಿದ್ದರು ಗಂಡು ಮಾತ್ರ ಪಡೆಯುವ ಆನಂದ ಹೆಣ್ಣಿಗೆ ಒಪ್ಪಿಸಿಕೊಳ್ಳುವ, ಅದೊಂದು ಬೇಸರದ ನೋವಿನ ಸಂಗತಿ ಎಂದೇ ಭಾವಿಸಲಾಗಿತ್ತು. ಆದ್ದರಿಂದಲೇ ಏಂಗಲ್ಸ್ ಇಂತಹ ತೀರ್ಮಾನಕ್ಕೆ ಬರುತ್ತಾನೆ ಎನ್ನುವ ಮಿಲೆಟ್ ಪುರುಷ ಪ್ರಧಾನ ವ್ಯವಸ್ಥೆಗೆ ತನ್ನ ಅಧೀನತೆಗೆ ಹೆಣ್ಣಿನ ಒಪ್ಪಿಗೆ ಇದೆ ಎಂಬುದನ್ನು ವಿರೋಧಿಸುತ್ತಾಳೆ.

ಹಾಗಿದ್ದರೆ ಪುರುಷ ಪ್ರಧಾನತೆಗೆ ಕಾರಣವೇನು ಎಂಬ ಹುಡುಕಾಟಕ್ಕೆ ತೊಡಗುವ ಮಿಲೆಟ್ ಹಲವು ಚಿಂತಕರ ವಿಚಾರಧಾರೆಗಳನ್ನು ಮುಂದಿಡುತ್ತಾಳೆ. ಕೆಲ ವಿದ್ವಾಂಸರು ಹೆಣ್ಣು ಮತ್ತು ಗಂಡಿನ ನಡುವಿನ ಸ್ಥಾನಮಾನಗಳು ಪ್ರಕೃತಿ ಸಹಜವಾಗಿಯೇ ರೂಪುಗೊಂಡಿವೆ ಎಂಬುದನ್ನು ಸಾಭೀತು ಮಾಡಲು ಹೆಣಗುತ್ತಾರೆ. ಹೆಣ್ಣು ಗಂಡಿನ ನಡುವಿನ ಜೈವಿಕ ವ್ಯತ್ಯಾಸಗಳೇ ಅವರ ಭಿನ್ನ ಸ್ಥಾನಮಾನಗಳಿಗೆ ಕಾರಣ ಎಂದು ಹಲವರು ವಾದಿಸಲು ಯತ್ನಿಸುತ್ತಾರೆ. ಆದರೆ ಇವುಗಳಿಗೆಲ್ಲಾ ಸರಿಯಾದ ಸಾಕ್ಷ್ಯವನ್ನು ಒದಗಿಸಲು ಸೋಲುತ್ತಾರೆ ಎಂಬುದನ್ನು ಕೃತಿ ಚರ್ಚಿಸುತ್ತದೆ.

ಲೈಂಗಿಕತಾ ರಾಜಕಾರಣವನ್ನು ಜಾರಿಯಲ್ಲುಳಿಸಲು ಅದು ಬಳಸುವ ಪ್ರಮುಖವಾದ ಅಸ್ತ್ರ ಮಾನಸಿಕ ಸಿದ್ಧತೆ. ಗಂಡು ಹೆಣ್ಣುಗಳನ್ನು ನಿಗಧಿತ ಕಾರ್ಯಕ್ಷೇತ್ರಗಳಲ್ಲಿ ಉಳಿಸಲು ವಿವಾಹ, ಕುಟುಂಬ, ಸಮಾಜ, ಧರ್ಮ, ಶಿಕ್ಷಣ ಮುಂತಾದವುಗಳು ಮಾನಸಿಕ ತರಬೇತಿಯನ್ನು ನೀಡುತ್ತದೆ. ಕುಟುಂಬಗಳಲ್ಲಿಯೇ ಆರಂಭವಾಗುವ ಈ ತರಬೇತಿ ಸಮಾಜೀಕರಣಗೊಳ್ಳುತ್ತಾ ರಾಜ್ಯಾಡಳಿತಗಳಲ್ಲೂ ಹಬ್ಬಿ ಬೆಳೆಯುತ್ತದೆ. ಈ ನಿಟ್ಟಿನಲ್ಲಿ ಪ್ರಮುಖವಾಗಿ ಬಳಸಿಕೊಳ್ಳುವ ಅಸ್ತ್ರಗಳು ಮಿಥ್‌ಗಳು ಅವುಗಳಲ್ಲಿ ಮಿಲೆಟ್ ಹೇಳುವ ಒಂದು ಉದಾಹರಣೆ ಆಡಂ ಮತ್ತೂ ಈವ್ ರದ್ದು ಅವರು ತಪ್ಪಿಗಾಗಿ ದೇವರು ಹೀಗೆ ಶಾಪಕೊಡುತ್ತಾನೆ. ಆಡಂನಿಗೆ ನಿನ್ನ ಹುಬ್ಬುಗಳು ಬೆವರಿನಿಂದ ತೋಯ್ದು ಹೋಗುವವರೆಗೂ ನೀನು ದುಡಿಯುತ್ತಲೇ ಇರಬೇಕು ಎಂದು ಶಪಿಸುತ್ತಾನೆ. ಈವ್‌ಳಿಗೆ "ನೀನು ದುಃಖದಲ್ಲಿ ಬಿದ್ದು ಮಕ್ಕಳನ್ನು ಹೆರುವ ಮತ್ತು ನಿನ್ನ ಕಾಮ ವಾಂಛೆಯು ನಿನ್ನ ಗಂಡನಿಗೆ ಮಾತ್ರವೇ ಮೀಸಲಾಗಿ ಇರುತ್ತದೆ ಮತ್ತು ಅವನು ಆಳುತ್ತಾನೆ" ಎಂದು ಶಪಿಸುತ್ತಾನೆ. ಆಡಂನನ್ನು ಪಾಪಕೂಪಕ್ಕೆ ತಳ್ಳಿದವಳು ಈವ್, ಹೆಣ್ಣು ಆದ್ದರಿಂದ ಅವಳನ್ನು ಸದಾಕಾಲವೂ ಅವಲಂಬಿತ ಸ್ಥಿತಿಯಲ್ಲಿ ಉಳಿಸಬೇಕು ಎಂದು ಹೇಳುತ್ತಲೇ ಹೆಣ್ಣು, ಸಂಭೋಗ ಮತ್ತು ಪಾಪಗಳನ್ನು ಸರಣಿಯಾಗಿ ಜೋಡಿಸಿ ನೋಡುವ ಮಾದರಿಗಳನ್ನು ಎಲ್ಲಾ ಪಿತೃಪ್ರಧಾನತೆಗಳು ಬಳಸುತ್ತವೆ. ಆ ಮೂಲಕ ಹೆಣ್ಣನ್ನು ಕೀಳರಿಮೆಗೆ ತಳ್ಳುತ್ತವೆ. ತನ್ನ ಯಜಮಾನ್ಯವನ್ನು ಮುಂದುವರೆಸುತ್ತವೆ. ಲೈಂಗಿಕ ಭಿನ್ನತೆ ಪಿತೃಪ್ರಧಾನತೆಗಳನ್ನೇ ತಾತ್ವಿಕ ನೆಲೆಗಟ್ಟಿನಲ್ಲಿ ಜೈವಿಕ ನೆಲೆಗಟ್ಟಿನಲ್ಲಿ ಸಾಮಾಜಿಕ ಮತ್ತು ಸಾಮಾಜಿಕತೆಯ ನೆಲೆಗಟ್ಟುಗಳಲ್ಲಿ ಆರ್ಥಿಕ ಮತ್ತು ಶೈಕ್ಷಣಿಕ ನೆಲೆಗಟ್ಟುಗಳಲ್ಲಿ ಕೆಲವೊಮ್ಮೆ ಬಲಪ್ರಯೋಗದ ನೆಲೆಗಟ್ಟಿನಲ್ಲಿ ಮಾನವಶಾಸ್ತ್ರದ ನೆಲಗಟ್ಟಿನಲ್ಲಿ ಮಿಥ್ ಮತ್ತು ಧರ್ಮ, ಮಾನಸಿಕ ನೆಲೆಗಟ್ಟುಗಳೆಲ್ಲದರಲ್ಲಿಯೂ ವ್ಯವಸ್ಥೆ ಹೇಗೆ ಜಾರಿಗೊಳಿಸಿದೆ ಎಂಬುದನ್ನು ವಿಸ್ತೃತವಾಗಿ ಚರ್ಚಿಸುತ್ತಾಳೆ.

**ಮಹಿಳಾ ಚಳುವಳಿಗಳು:** ಪಿತೃಪ್ರಧಾನತೆಯ ಅರಿವನ್ನು ಹೊಂದಿದ ಮಹಿಳೆಯರು ಸಮಾನತೆಗಾಗಿ ಹಲವು ಚಳುವಳಿಗಳನ್ನು ರೂಪಿಸಿದರು. ಅದು ಮೊದಲು ಆರಂಭವಾಗಿದ್ದೇ ಅಮೇರಿಕಾದಲ್ಲಿ ೧೮೩೦ ರಿಂದ ೧೯೩೦ರವರೆಗೆ ನಡೆದ ಈ ಚಳುವಳಿಗಳಲ್ಲಿ ಮಹಿಳೆಯರು ಹಲವು ಸೌಕರ್ಯಗಳನ್ನು ಪಡೆಯಲು ಯಶಸ್ವಿಯಾದರೂ ಆದರೆ ತಮ್ಮ ಅಧೀನ ಸ್ಥಿತಿಯಿಂದ ಹೊರಬರಲು ಸಾಧ್ಯವಾಗಲೇ ಇಲ್ಲ. ಇದಕ್ಕೆ ಪ್ರಮುಖವಾಗಿ ಎದುರ ಕ್ರಾಂತಿ ಮತ್ತು ಚಳುವಳಿಗಳಲ್ಲಿದ್ದ ಲೋಪಗಳು ಕಾರಣ ಎಂದು ಮಿಲೆಟ್ ಗುರುತಿಸುತ್ತಾಳೆ. ಲೈಂಗಿಕತಾ ರಾಜಕಾರಣದ ದೊಡ್ಡ ಅಸ್ತ್ರ ಮಹಿಳೆಯರು ಒಟ್ಟುಗೂಡದಂತೆ ನೋಡಿಕೊಳ್ಳುವುದು ಇದನ್ನು ಎದುರು ಕ್ರಾಂತಿಯಲ್ಲಿ ಸಮರ್ಥವಾಗಿ ಬಳಸಲಾಯಿತು. ಮಹಿಳಾ ಕ್ರಾಂತಿ ಎದುರಾಗಿ ಪರಂಪರೆಯನ್ನು ಸಮರ್ಥಿಸುವ ವರ್ಗವೂ ಮಹಿಳಾ ಸಮಾನತೆ ಎಂಬುದು ದುರಂತಗಳಿಗೆ ಕಾರಣವಾಗುತ್ತದೆ. ಈಗಿರುವ ವ್ಯವಸ್ಥೆಯಲ್ಲಿಯೇ ಹೆಣ್ಣು ಸುರಕ್ಷಿತಳಾಗಿದ್ದಾಳೆ ಎಂಬ ವಾದವನ್ನು ಯಶಸ್ವಿಯಾಗಿ ಮಂಡಿಸಿದ್ದವು. ಮಹಿಳಾ ಚಳುವಳಿಗಳು ತಮ್ಮ ಬಾಹ್ಯ ಹಕ್ಕುಗಳಿಗಾಗಿ ಹೋರಾಡಿದರೆ ವಿನಃ ತಲೆಮಾರುಗಳಿಂದ ಬೆಳೆದು ಬಂದ ಮಾನಸಿಕ ತರಬೇತಿಯ ಕಡೆ ಗಮನ ಹರಿಸಲಿಲ್ಲ. ಏನೇ ಆದರೂ ಈ ಚಳುವಳಿಗಳಿಂದಾಗಿ ಮಹಿಳೆಯರು ಹೊರಗಿನ ವಾತಾವರಣಕ್ಕೆ ತೆರೆದುಕೊಳ್ಳುವಂತಾಯಿತು. ಆರ್ಥಿಕ, ಶೈಕ್ಷಣಿಕ, ರಾಜಕೀಯ ಕ್ಷೇತ್ರಗಳಿಗೆ ಪ್ರವೇಶ ಪಡೆಯುವಂತಾಯಿತು. ಇದು ದೊಡ್ಡ ಸಾಧನೆಯೇ ಹೌದು ಎಂಬುದರಲ್ಲಿ ಎರಡು ಮಾತಿಲ್ಲ.

ರಷ್ಯಾ ಕ್ರಾಂತಿಯ ನಂತರ ಲೆನಿನ್ ಸರ್ಕಾರ ಮಹಿಳೆಯರಿಗಾಗಿ ಅವರ ಸ್ವತಂತ್ರಕ್ಕಾಗಿ ಜಾರಿಗೆ ತಂದ ಕಾನೂನುಗಳು ಸೋಲಲು ಎದುರುಕ್ರಾಂತಿ, ಸಿದ್ಧತೆಯ ಕೊರತೆಗಳೇ ಕಾರಣಗಳಾದವು ಎನ್ನುವುದನ್ನು ಲೆನಿನ್ ಮಾತುಗಳನ್ನು ಉದಾಹರಿಸುತ್ತಲೇ ವಿವರಿಸುತ್ತಾಳೆ ಮಿಲೆಟ್. ಮಹಿಳಾ ಚಳುವಳಿಗಳಿಂದಾಗಿ ಹುಟ್ಟಿಕೊಂಡ ಹಲವು ವಾದ ವಿವಾದಗಳಲ್ಲಿ ರಸ್ಕಿನ್ ಮತ್ತು ಮಿಲ್ ರ ವಾದಗಳನ್ನು ಮುಂದಿಟ್ಟು ಅವುಗಳಲ್ಲಿರುವ ಭಿನ್ನತೆಯನ್ನು ಕೃತಿ ವಿವರಿಸುತ್ತದೆ. ರಸ್ಕಿನ್ ಶಿವಲ್ರಿ ಎಂದರೆ ಅನುನಯದ ಮೂಲಕ ಹೆಣ್ಣುಗಳನ್ನು ಪುರುಷಾಧೀನತೆಯನ್ನು ಒಪ್ಪಿಕೊಳ್ಳುವಂತೆ ಮಾಡುವ ತಂತ್ರಗಳನ್ನು ಬಳಸಿಕೊಂಡು ಮಾತನಾಡುತ್ತಾನೆ. ಮಿಲ್ ವಾಸ್ತವವಾದಿಯಾಗಿ ಹೆಣ್ಣಿನ ಮುಕ್ತತೆಯ ದಾರಿಗಳನ್ನು ಕುರಿತು ಮಾತನಾಡುತ್ತಾನೆ. ಉದಾಹರಣೆಗೆ ರಸ್ಕಿನ್ ಹೆಣ್ಣಿಗೆ ಶಿಕ್ಷಣವೇ ಬೇಕಿಲ್ಲ. ಆಕೆ ಸ್ವತಃ ಪ್ರಕೃತಿ ಎಲ್ಲವೂ ಆಗಿರುವವಳು, ಶಿಕ್ಷಣ ಅವಳಿಗೊಂದು ಅಲಂಕಾರವಷ್ಟೇ ಅನ್ನುತ್ತಾನೆ. ಮಿಲ್ ಹೆಣ್ಣುಮಕ್ಕಳಿಗೆ ಶಿಕ್ಷಣದ ಅಗತ್ಯವನ್ನು ವಿವರಿಸುತ್ತಾನೆ.

ಏಂಗಲ್ಸ್ ಪ್ರಗತಿ ನಿರಂತರ ಸತ್ಯ ಎಂಬ ಮಾತನ್ನು ಹೇಳುತ್ತಾ, ಮಾತೃಪ್ರಾಧಾನ ಸಂಸ್ಕೃತಿ ಪಿತೃ ಪ್ರಧಾನ ಸಂಸ್ಕೃತಿಯ ಕಡೆಗೆ ಹೊರಳಿದಂತೆ ನಿಧಾನ ಗತಿಯಲ್ಲಿ ಇದು ಬದಲಾಗುತ್ತದೆ. ಎಂಬ ಆಶಾವಾದವನ್ನು ವ್ಯಕ್ತಪಡಿಸುತ್ತಾನೆ. (ಮಾತೃ ಪ್ರಧಾನ ಸಂಸ್ಕೃತಿ ಇತ್ತು ಎನ್ನುವುದನ್ನೇ ಸ್ತ್ರಿವಾದಿ ಚಿಂತಕರು ಅನುಮಾನಿಸುತ್ತಾರೆ) ಇದೇ ಆಶಾವಾದವನ್ನು ನಾವು ನಂಬಿ ಮುನ್ನಡೆಯುವುದರ ಜೊತೆಗೆ ಆ ದಾರಿಯಲ್ಲಿ ಹೋರಾಟಗಳನ್ನು ಮಾಡಬೇಕಾಗುತ್ತದೆ. ಇದರಿಂದ ಇಂದು ಹೆಣ್ಣು ತನ್ನ ಸ್ಥತಿಗೆ ಸಂಸ್ಕೃತಿಯೇ ಕಾರಣ,ವ್ಯವಸ್ಥೆಯೇ ಕಾರಣ ಎಂಬುದನ್ನು ಗ್ರಹಿಸುವ ಮಟ್ಟಿಗಾದರೂ ಜಾಗೃತಳಾಗಿದ್ದಾಳೆ. ಮನಃಶಾಸ್ತ್ರದ ನೆಲೆಗಟ್ಟಿನಲ್ಲಿ ಪಿತೃಪ್ರಧಾನತೆಯನ್ನು ಸ್ಥಿರಗೊಳಿಸುವ ಪ್ರಯತ್ನದಲ್ಲಿ ಸಿಗ್ಮಂಡ್ ಫ್ರಾಯ್ಡ್‌ನ ಕೊಡುಗೆ ಬಹುದೊಡ್ಡದು. ಆತ ಸ್ವಮೋಹ, ಆತ್ಮಪೀಡನಾ, ಶಿಶ್ನದ್ವೇಷಾ ಎಂಬುದು ಹೆಣ್ಣಿನ ಗುಣಗಳು ಎನ್ನುತ್ತಾನೆ. ಹೆಣ್ಣು ಉನ್ನತ ಬೌದ್ಧಿಕ ವಲಯವನ್ನು ಪ್ರವೇಶಿಸಲು ಬಯಸುವುದು ಕೂಡ ಅವಳ ಶಿಶ್ನದ್ವೇಷದ ಕಾರಣವಾಗಿ ಎಂಬ ಅತಿರೇಕದ ವಾದವನ್ನು ಮಂಡಿಸುತ್ತಾನೆ. ಈತನ ವಾದಗಳನ್ನು ಮಿಲೆಟ್ ಆಧಾರಗಳಿಲ್ಲದ ಅರ್ಥಹೀನ ವಾದಗಳೆಂದು ಹೇಳುತ್ತಾಳೆ. ಆದರೆ ಫ್ರಾಯ್ಡ್‌ನ ಸಿದ್ಧಾಂತಗಳು ಉಂಟುಮಾಡಿದ ಪರಿಣಾಮ ಮಾತ್ರ ದೊಡ್ಡ ಪ್ರಮಾಣದ್ದೇ ಆಗಿದೆ ಎನ್ನುವುದನ್ನು ವಿವರಿಸುತ್ತಾಳೆ.

ಮಿಲೆಟ್ ಸಾಹಿತ್ಯದಲ್ಲಿ ಲೈಂಗಿಕತಾ ರಾಜಕಾರಣದ ಪ್ರತಿಫಲನಗಳನ್ನ ವಿವರಿಸಲು ಡಿ.ಎಚ್. ಲಾರೆನ್ಸ್, ಹೆನ್ರಿ ಮಿಲ್ಲರ್, ನಾರ್ಮನ್ ಮೇಯ್ಲರ್, ಜೀನ್ ಜೀನೇ ಈ ನಾಲ್ವರ ಕೃತಿಗಳ ಭಾಗಗಳನ್ನ ಆಯ್ದುಕೊಂಡಿದ್ದಾಳೆ. ಇವರಲ್ಲಿ ಕಾಣುವ ಲೈಂಗಿಕತಾ ರಾಜಕಾರಣದ ಬಗೆಗಳು ಆಯಾ ಕೃತಿಕಾರರ ಮನೋಧರ್ಮಗಳೂ ಎನ್ನಬಹುದು. ಅಥವಾ ಆಯಾ ಕಾಲಘಟ್ಟಗಳಲ್ಲಿ ಪಿತೃಪ್ರಧಾನ ವ್ಯವಸ್ಥೆಯ ವ್ಯಕ್ತಿಗಳನ್ನು ಬಳಸಿಕೊಂಡ ಬಗೆಗಳು ಎನ್ನಬಹುದು. ಇವರ ಕೃತಿಗಳಲ್ಲಿ ಪಿತೃಪ್ರಧಾನತೆ ಹೇಗೆ ಮೂಡಿದೆ ಎಂಬುದನ್ನು ಮಿಲೆಟ್ ವಿವರಾಗಿ ಚರ್ಚಿಸುತ್ತಾಳೆ. ಅವುಗಳನ್ನು ಶ್ರೀಮತಿಯವರು ಕನ್ನಡದಲ್ಲಿ ನಿರೂಪಿಸಿರುವ ರೀತಿಯು ಉತ್ತಮವಾಗಿದೆ.

ಸಮಾರೋಪ ಲೈಂಗಿಕಾ ಕ್ರಾಂತಿಯ ಆಶಯಗಳನ್ನು ಹಾಗೂ ಅದರ ಪ್ರಧಾನ ತಾತ್ವಿಕತೆಯನ್ನು ೧೯೭೪ರ ಹಿಂದೆಯೇ ಕೇಟ್ ಮಿಲೆಟ್ ಸಮಗ್ರವಾಗಿ ವಿವರಿಸಿದ್ದಾಳೆ. ಪಿತೃಪ್ರಧಾನ ವ್ಯವಸ್ಥೆಗೆ ದುರ್ಬಲ ಜನರ ಮೇಲೆ ಅಧಿಕಾರವನ್ನು ಸ್ಥಾಪಿಸುವುದು ಮುಖ್ಯ ಗುರಿಯೇ ಹೊರತು, ಇಡಿಯಾಗಿ ಪುರುಷ ಸಮುದಾಯಗಳ ಎಲ್ಲರಿಗೂ ಅಧಿಕಾರವನ್ನು ಹಂಚುವ ಇರಾದೆಯೇನೂ ಅದಕ್ಕಿಲ್ಲ ಎಂಬುದನ್ನು ಸ್ತ್ರೀವಾದಿ ಚಿಂತನೆಗಳು ಸಾಬೀತುಪಡಿಸಿವೆ. ಎಲ್ಲ ಬಗೆಯ ಹೋರಾಟಗಳು ಈ ತಾತ್ವಿಕ ಚಿಂತನೆಯನ್ನು ಸೂಕ್ಷ್ಮವಾಗಿ ಪರಿಗಣಿಸುವುದು ಸೂಕ್ತ. ಈ ನಿಟ್ಟಿನಲ್ಲಿ ಮಿಲೆಟ್ ಳ ವಿಚಾರಗಳು ಎಲ್ಲ ಬಗೆಯ ಸಾಮಾಜಿಕ ಹೋರಾಟಗಳಿಗೂ ನೆರವಾಗುತ್ತವೆ. ಎನ್ನುವುದು ಕನ್ನಡ ನಿರೂಪಕರ ಆಶಯವಾಗಿದೆ.

**ಪರಾಮರ್ಶನ**


1. ಅಧಿಕಾರ ಅಧೀನತೆ ಕೇಟ್ ಮಿಲೆಟ್ ವಿಚಾರಗಳು
2. ಕೇಟ್ ಮಿಲೆಟ್ ಳ ಸೆಕ್ಷುಯಲ್ ಪಾಲಿಟಿಕ್ಸ್ ಕೃತಿಯ ಕನ್ನಡ ಅನುವಾದ
3. ಅನುವಾದಕರು; ಶ್ರೀಮತಿ ಎಚ್.ಎಸ್., ಆಕರ ಪ್ರಕಾಶನ, ಪ್ರಥಮ ಮುದ್ರಣ–೨೦೨೨.